ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಮೊದಲಿಗೆ 44 ಟಿಎಂಸಿ ನೀರು ಸಿಗುತ್ತದೆಂದು ಯೋಜನೆ ತಯಾರು ಮಾಡಿದ್ದು ಅವರಿಗೆ ಗೊತ್ತಿದೆ. ಆದರೆ 44 ಟಿಎಂಸಿ ಬದಲಿಗೆ ಕೇವಲ 27 ಟಿಎಂಸಿ ಮಾತ್ರ ಸಂಗ್ರಹವಾಗತೊಡಗಿತು. ಯಾವಾಗ ನೀರೇ ಕಡಿಮೆಯಾಯಿತು ಹಿಂದೆ ನಾವೇನು ಯೋಜನೆ ತಯಾರು ಮಾಡಿದ್ದೆವು ಆಷ್ಟೂ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಕೊಡಲು ಆಗುವುದಿಲ್ಲ. ಆದರೂ ಏತ ನೀರಾವರಿ ಮೂಲಕ ಏನು ನೀರು ಕೊಡಬೇಕಾಗಿತ್ತು. ಆ ಪ್ರಯತ್ನ ಈಗಾಗಲೇ ನಡೆದಿದ್ದರೂ ಕೆಲವು ಸಲ ವಿದ್ಯುತ್ ತೊಂದರೆಯಿಂದ ಲಿಫ್ಟ್ ಮಾಡಿ ನೀರು ಕೊಡಲು ಸಾಧ್ಯವಾಗುವುದಿಲ್ಲ. ಕೆಲವು ಸಲ ನೀರಿನ ಪ್ರಮಾಣ ಕಡಿಮೆ ಇದ್ದ ಕಾರಣ ನೀರು ಕೊಡಲು ಆಗುವುದಿಲ್ಲ. ಆ ಒಂದು ದೃಷ್ಟಿಯಿಂದ ಈ ಯೋಜನೆಗೆ ತೊಂದರೆಯಾಗಿದೆಯೇ ಹೊರತು ಮತ್ತೆ ಸರ್ಕಾರವೇನು ಯಾವುದೇ ದುರುದ್ದೇಶದಿಂದ ಇದನ್ನು ನಿಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಎರಡನೆಯದಾಗಿ 2004–2005 ಸಾಲಿನಲ್ಲಿ ಹಿಂಗಾರು ಹಂಗಾಮಿ ರೇಣುಕ ಏತ ನೀರಾವರಿ ಯೋಜನೆಯಲ್ಲಿ ಮಾತ್ರ ತೆಗೆದುಕೊಳ್ಳಬೇಕೆಂದು ಇದೆ. ಇದರಲ್ಲಿ ಉದಾಹರಣೆಗೆ ನೂರು ಎಕರೆ ನೀರಾವರಿಯಾಗಬೇಕಾದರೆ ಇದರಿಂದ ಸಧ್ಯಕ್ಕೆ 83 ಎಕರೆ ಅಂದರೆ 83 ಪರ್ಸೆಂಟ್ ನೀರಾವರಿಯಾಗುತ್ತಿದೆ. ಅದಕ್ಕಾಗಿ ಇನ್ನೊಂದು ಸಿಂಗಾರಕೊಪ್ಪ ಏತ ನೀರಾವರಿಯಲ್ಲಿ ಅಲ್ಲಿ 77 ಪರ್ಸೆಂಟ್ ನೀರಾವರಿ ಆಗುತ್ತಿದೆ. ಅದಕ್ಕಾಗಿ ಹಿಂದೆ ಏನು ನೋಟಿಫೈ ಮಾಡಲಾಗಿತ್ತು ಅದಕ್ಕೆ ನೀರು ಕೊಡಬೇಕಾದಷ್ಟು ಇಲ್ಲದ ಕಾರಣ ಕೇವಲ 83, 87: ಪರ್ಸೆಂಟ್ ಮಾತ್ರ ನೀರು ಸಿಗುತ್ತಿದೆ. ಅದಕ್ಕೆ ರೈತರು ಅಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಎಲ್ಲ ನಾವು ಹೆವಿ ಇರಿಗೇಶನ್ ಮಾಡುತ್ತೇವೆ ಅಥವಾ ನಮಗೆ ಎರಡು ಹೊತ್ತೂ ನೀರು ಬೇಕು ಅಂದರೆ ಕಷ್ಟವಾಗುತ್ತದೆ. ನೀರಿನ ಲಭ್ಯತೆ ನೋಡಿಕೊಂಡು ಅದನ್ನು ಉಪಯೋಗ ಮಾಡಿಕೊಂಡರೆ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ.

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ:– ಏತ ನೀರಾವರಿ ಸಲುವಾಗಿ ಮೆಶಿನರಿ ಕೂರಿಸಿ 30 ವರ್ಷವಾಯಿತು. ಅದರ ಲೈಫ್ ಪೀರಿಯಡ್ ಮುಗಿದಿರಬಹುದು ಎನ್ನುವ ಮಾತಿದೆ. ಮೆಶಿನರಿ ಚೇಂಜ್ ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮೆಶಿನರಿ ಕೆಟ್ಟರೆ ತೊಂದರೆ ಇದ್ದರೆ ನಮ್ಮ ಮುಖ್ಯ ಇಂಜಿನಿಯರ್‌ಗೆ ಹೇಳಿ ಎಕ್ಸಾಮಿನ್ ಮಾಡಿಸಿ ಅದನ್ನು ರಿಪ್ಲೇಸೋ ರಿಪೇರಿನೋ ಮಾಡಿಸಲು ಕ್ರಮ ಕೈಗೊಳ್ಳುತ್ತೇನೆ.

ಧಾರವಾಡ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೆರೆಗಳಲ್ಲಿ ಹೂಳು ಎತ್ತುವ ಕಾಮಗಾರಿ

220 (1967) ಶ್ರೀ ಎನಯ ಕುಲಕರ್ಣಿ (ಧಾರವಾಡ ಗ್ರಾಮೀಣ): ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಗ್ರಾಮೀಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಕೆರೆಗಳು ಸಂಪೂರ್ಣ ಹೂಳು ತುಂಬಿ ಇಲ್ಲಿನ ರೈತರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಕೆರೆಗಳ ಹೂಳೆತ್ತುವ ಬಗ್ಗೆದ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕೆರೆಗಳಲ್ಲಿ ಕೆಲವು ಮಟ್ಟಿಗೆ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ರೈತ ಕಾಯಕ ಕೆರೆ 2 ಕೆರೆಗಳ ಹಾಗೂ ಬರ ಪರಿಹಾರ ಕಾಮಗಾರಿ ಯೋಜನೆಯಡಿ 37 ಕೆರೆಗಳ ಭಾಗಶಃ ಹೂಳೆತ್ತಿ ಅಭಿವೃದ್ಧಿ ಪಡಿಸಲಾಗಿದೆ.

ಅಧ್ಯಕ್ಷರು:– ಮಾನ್ಯ ಹೆಚ್. ಹಾಲಪ್ಪ, ಎಂ.ಟಿ. ಕೃಷ್ಣಪ್ಪನವರು ಮಾನ್ಯ ಸದಸ್ಯರುಗಳು ಗೈರುಹಾಜರಿದ್ದಾರೆ.

+ ಶ್ರೀ ವಿನಯ ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ಮೈನರ್ ಇರಿಗೇಶನ್ ಇಲಾಖೆಯಲ್ಲಿ ನನ್ನ ಮತಕ್ಷೇತ್ರದಲ್ಲಿ ಇರುವಂತಹ 40 ರಿಂದ 50 ಕೆರೆಗಳ ಪೈಕಿ ಉದಾಹರಣೆಗಾಗಿ ತಮಗೆ ಹೇಳಬೇಕೆಂದರೆ ಪ್ರಭುನಗರ ಹೊನ್ನಾಪುರದಲ್ಲಿ 108 ಎಕರೆ ಕೆರೆ ಇದೆ. ಡೋರಿ ಎಂಬ ಊರಿನಲ್ಲಿ 280 ಎಕರೆ ಇದೆ. ಹುಲಿಕೆರೆಯಲ್ಲಿ ನಾಲ್ಕು ನೂರು ಚಿಲ್ಲರೆ ಎಕರೆ ಕೆರೆ ಇದೆ. ಹೀಗೆ ನೂರು ಎಕರೆಗೆ ಮೀರಿದ 20ಕ್ಕೂ ಮಿಕ್ಕಿ ಕೆರೆಗಳಿವೆ. ಇವತ್ತಿನವರೆಗೆ ಯಾವುದೇ ಹೂಳೆತ್ತುವ ಕೆಲಸ ಅಲ್ಲಿ ನಡೆದಿಲ್ಲ. ಈವತ್ತು ಆ ಕೆರೆಗಳಲ್ಲಿ ಸಂಪೂರ್ಣ ಹೂಳು ತುಂಬಿಕೊಂಡಿವೆ. ನೀರು ಬಂದದ್ದು ಹರಿದುಹೋಗುತ್ತದೆ. ಅಂತಹ ಕೆರೆಗಳನ್ನು ಜೀವನದಲ್ಲಿ ನಾವು ಯಾರೂ ಮರಳಿ ಕಟ್ಟಲಾರದ ಪರಿಸ್ಥಿತಿ ಇದೆ. ಅಂತಹ ಕೆರೆಗಳನ್ನು ತಾವು ಉಳಿಸಿಕೊಂಡು ಹೋಗಬೇಕೆಂದು ವಿನಂತಿ ಮಾಡಿಕೊಂಡು ಆ ಕುರಿತಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂದು ತಿಳಿಯ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಭಾಗ ಇದೆ. ಸಣ್ಣ ನೀರಾವರಿಗೆ ಬರುವ ಕೆರೆಗಳು 39 ಇದೆ. ಅದರಲ್ಲಿ ಸುಮಾರು ಭಾಗಶಃ 37 ಕೆರೆಗಳ ರಿಪೇರಿಯನ್ನು ಬರಗಾಲ ಕಾಮಗಾರಿ ಮತ್ತು ಎರಡು ಕೆರೆಗಳನ್ನು ರೈತ ಕಾಯಕ ಕೆರೆ ಕಾರ್ಯಕ್ರಮದಲ್ಲಿ ಈ ರೀತಿ ಮಾಡಿದೆ. ಉಳಿದವು ಜಿಲ್ಲಾ ಪಂಚಾಯ್ತಿಗೆ ಬರುತ್ತವೆ ಅವುಗಳನ್ನು ಜಿಲ್ಲಾ ಪಂಚಾಯ್ತಿ ಯೋಜನೆಯಡಿ ಮಾಡಬೇಕಾಗುತ್ತದೆ. ಅದಕ್ಕೆ ವಿಶೇಷ ಹಣವನ್ನು ಜಿಲ್ಲಾ ಪಂಚಾಯ್ತಿಯಿಂದ ಅಥವಾ ಕೂಲಿಗಾಗಿ ಕಾಳು ಯೋಜನೆಯಡಿ ಬರಗಾಲ ನಿಧಿಯಿಂದ ಪಡೆದುಕೊಂಡು ತಾವು ಮಾಡಬಹುದು. ನನಗೆ ಸಂಬಂಧಪಟ್ಟಿದ್ದು ಕೇವಲ 39 ಕೆರೆಗಳು ಮಾತ್ರ. ಧಾರವಾಡ ಗ್ರಾಮಾಂತರ ಪ್ರದೇಶದಲ್ಲಿ ಬರುತ್ತವೆ. ಅದಕ್ಕೆ ಸ್ವಲ್ಪಮಟ್ಟಿಗೆ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಏಕೆಂದರೆ ಹೂಳೆತ್ತುವ ಕಾರ್ಯಕ್ರಮವನ್ನು ನೂರಕ್ಕೆ ನೂರು ಮಾಡುವುದಕ್ಕೆ ಆಗುವುದಿಲ್ಲ. ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ. ಆದರೆ ಎಷ್ಟು ಹಣ ನಾವು ಒದಗಿಸಿದ್ದೇವೆ ಅದಕ್ಕೆ ತಕ್ಕಂತೆ 37 ಕೆರೆಗಳಲ್ಲಿ ಹೂಳು ತೆಗೆಯುವುದು ಹಿಂದೆ ಆಗಿದೆ. ಎರಡು ಕೆರೆಗಳನ್ನು ರೈತ ಕಾಯಕದಡಿ

+ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಪರಿಷ್ಕರಿಸಲಾಗಿದೆ ಎಂದು ಸೂಚಿಸುತ್ತದೆ.

ಕಾರ್ಯಕ್ರಮದಲ್ಲಿ ಮಾಡಲಾಗಿದೆ. ಉಳಿದವು ಜಿಲ್ಲಾ ಪಂಚಾಯ್ತಿಗೆ ಲಿಸ್ಟ್ ಕೊಟ್ಟರೆ ಬಹುಶಃ ಮುಂದೇನು ಹೊಸ ಕಾರ್ಯಕ್ರಮಗಳು ಬರುತ್ತವೆ. ಅವುಗಳ ಅಡಿಯಲ್ಲಿ ಅವರು ತೆಗೆದುಕೊಳ್ಳುವರು.

ಶ್ರೀ ವಿನಯ ಕುಲಕರ್ಣಿ:– ಮಾನ್ಯ ಸಚಿವರು ರೈತ ಕಾಯಕ ಕೆರೆ ಮತ್ತೆ ಬರಗಾಲ ಕಾಮಗಾರಿ ಕಾರ್ಯಕ್ರಮದಡಿ ಮಾಡಲಾಗಿದೆ ಎಂದಿದ್ದಾರೆ. ಅದರಡಿಯಲ್ಲಿ 30 ಘೂಟು ಅಗಲ ತೆಗೆದಿದ್ದಾರೆ ಎಂದು ನನಗನ್ನಿಸುತ್ತದೆ. 200 ರಿಂದ 300 ಅಡಿ ಮಾತ್ರ ಉದ್ದ ತೆಗೆದಿದ್ದಾರೆ ಎಂದು ತಿಳಿದಿದ್ದೇನೆ. ಎಲ್ಲೂ ಹೂಳೆತ್ತಿಲ್ಲ ಬೇಕಾದರೆ ಇದನ್ನು ತಾವು ಪರಿಶೀಲನೆ ಮಾಡಿಸಬೇಕು ಅಂತ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿಗೂ ಕೆರೆ ಖಾಲಿ ಇವೆ. ಯಾವ ಕೆರೆಯೂ ಇವತ್ತಿಗೂ ತುಂಬಿಲ್ಲ. ತಾವೇನು ರೈತ ಕಾಯಕ ಕೆರೆಯಲ್ಲಿ ಇವುಗಳು ಸೇರುತ್ತವೆ ಎನ್ನುತ್ತೀರಿ ಅದರಲ್ಲಿ ಸಂಪೂರ್ಣವಾಗಿ ಎಲ್ಲೂ ಕೆಲಸ ನಡೆದಿಲ್ಲ ಎಂದು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ರೈತ ಕಾಯಕದಡಿ ಎರಡು ಕೆರೆಗಳು, ಸಣ್ಣ ನೀರಾವರಿಯ 39 ಕೆರೆಗಳಲ್ಲಿ ಬಹುತೇಕ ಕೆರೆಗಳಲ್ಲಿ ಹೂಳು ತುಂಬಿರುತ್ತದೆ. 2003–04 ಸಾಲಿನಲ್ಲಿ ಡೋರಿ ಕೆರೆಯಲ್ಲಿ 29 ಲಕ್ಷ ರೂಪಾಯಿ ವೆಚ್ಚದಲ್ಲಿ, 2004–05 ಸಾಲಿನಲ್ಲಿ ಬಕ್ಕಾಪುರ ಕೆರೆಯಲ್ಲಿ 24.45 ಲಕ್ಷ ವೆಚ್ಚದಲ್ಲಿ, ಹೂಳೆತ್ತಲಾಗಿದೆ. ಉಳಿದ 37 ಕೆರೆಗಳಲ್ಲಿ ಹೂಳೆತ್ತುವ ಕಾರ್ಯವನ್ನು 2002–03, 2003–04 ಮತ್ತು 2004–05 ಸಾಲಿನಲ್ಲಿ ಬರ ಪರಿಹಾರ ಕಾಮಗಾರಿಯಡಿ ಕೈಗೊಂಡಿದ್ದು ಇದಕ್ಕಾಗಿ ಕ್ರಮವಾಗಿ 59.80 ಲಕ್ಷ ಹಾಗೂ 119.60 ಲಕ್ಷ ರೂ ಮತ್ತು 21 ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ. ಕೆರೆಗಳನ್ನು ಭಾಗಶಃ ಹೂಳೆತ್ತಿ ಅಭಿವೃದ್ಧಿಪಡಿಸಲಾಗಿದ್ದು ಮುಂದಿನ ಸಾಲುಗಳಲ್ಲಿ ಅನುಧಾನ ಲಭ್ಯತೆ ಅನುಸರಿಸಿ ಉಳಿದ ಕೆಲಸವನ್ನೂ ತೆಗೆದುಕೊಳ್ಳಲಾಗುವುದು. ನಾನು ಮೊದಲೇ ಹೇಳಿದೆ. ಎಲ್ಲಾ ಕೆರೆಗಳಲ್ಲಿ ಹೂಳೆತ್ತುವುದು ಒಮ್ಮೆಯೇ ಮಾಡಿಲ್ಲ. ಎಷ್ಟು ಹಣ ಬರುವುದೋ ಬರಗಾಲದಲ್ಲಿ ಎಷ್ಟು ಹಣ ಲಭ್ಯವಿರುತ್ತದೆ ಅದರ ಪ್ರಕಾರ ಕೆಲಸ ತೆಗೆದುಕೊಂಡಿದ್ದೇವೆ ಹೊರತು ಸಂಪೂರ್ಣವಾಗಿ ಒಂದೇ ಸಲ ಮಾಡಿರುವುದಿಲ್ಲ ಆ ಪ್ರಕಾರ ಅವರೂ ಬರಗಾಲ ಪೀಡಿತ ಕೆಲಸಗಳಡಿ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಅಧ್ಯಕ್ಷರು:– ಅನಿಲ್ ಎಚ್. ಲಾಡ್ ಮಾನ್ಯ ಸದಸ್ಯರು ಗೈರು–ಹಾಜರಿದ್ದಾರೆ. ಎಷ್ಟು ಸಾರಿ ಹೇಳುವುದು? ದಯಮಾಡಿ ಕುಳಿತುಕೊಳ್ಳಿ.

ಆಲಮಟ್ಟಿ ಜಲಾಶಯದಿಂದ ಬಿಜಾಪುರ ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳಿಗೆ ನೀರು ಹರಿಸುವುದು

223 (3213) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಜಲಾಶಯದಿಂದ ಬಿಜಾಪುರ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳ ಸಣ್ಣ ನೀರಾವರಿ ಕೆರೆಗಳಿಗೆ ನೀರು ಹರಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆಗಳಿವೆಯೇ;